# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪ ವಿಭಾಗ

## ಕೆಂಪೇಗೌಡ ವಾರ್ಡ್ ನಂ–01ರಲ್ಲಿ ದಿನಾಂಕ: 06–03–2021 ರಂದು ನಡೆದ ಸಮಿತಿ ಸಭಾ ನಡವಳಿ.

ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. ಶ್ರೀ.ರಜನಿಕಾಂತ್ ಮಲ್ಲಿ, ಅಧ್ಯಕ್ಷರು ಹಾಗೂ ನೊಡಲ್ ಅಧಿಕಾರಿಗಳು.
2. ಶ್ರೀ.ಮಲ್ಲಿನಾಥ ಮಲ್ಕಾಪುರ, ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿ.
3. ಶ್ರೀ. ಶಶಿಕುಮಾರ್ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ
4. ಶ್ರೀ.ಚಂದ್ರಪ್ಪ ಅರಣ್ಯ ಇಲಾಖೆ
5. ಶ್ರೀ.ಬಾಬು ರೆಡ್ಡಿ ಸಹಾಯಕ ಅಭಿಯಂತರರು ವಿದ್ಯುತ್
6. ಶ್ರೀ. ವೆಂಕಟೇಶ್ ಮೂರ್ತಿ, ಹಿರಿಯ ಆರೋಗ್ಯ ಪರಿವೀಕ್ಷಕರು.
7. ಶ್ರೀ.ವಿವೇಕ್, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ–01.

ವಾರ್ಡ್ ಸಮಿತಿಯ ಪ್ರಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 01 | ಯಲಹಂಕ ವಾರ್ಡ್ 1ರ ವ್ಯಾಪ್ತಿಯಲ್ಲಿರುವ ಅಯ್ಯಪ್ಪಸ್ವಾಮಿ ದೇವಸ್ಥಾನದ ರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯವರು ನಿರ್ವಹಿಸಿದ ಕಾಮಗಾರಿಯ ಮಣ್ಣನ್ನು ತೆಗೆದುಹಾಕುವಂತೆ ಸ್ಥಳೀಯರು ಸಭೆಯಲ್ಲಿ ಕೋರಿದರು. | ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರಾದ ಶ್ರೀ. ಶಶಿಕುಮಾರ್ ರವರಿಗೆ ಸ್ಥಳದಲ್ಲಿ ಪರೀಶಿಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ನೋಡೆಲ್ ಅಧಿಕಾರಿಗಳು ತಿಳಿಸಿದರು. | ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ) |
| 02 | ದಿನಾಂಕ: 7–3–2021 ಮತ್ತು 8–3–2021 ರಂದು ವಾರ್ಡ್‌ನಂ–02 ರ ವ್ಯಾಪ್ತಿಯಲ್ಲಿರುವ ಸಮುದಾಯ ಭವನ ಕಟ್ಟಡದಲ್ಲಿ ವಿಶ್ವವಾಣಿ ಫೌಂಡೇಷನ್ ವತಿಯಿಂದ ಉಚಿತಾ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಿದ್ದು, ಸದರಿ ದಿನಗಳಂದು ಸಮುದಾಯ ಭವನವನ್ನು ಸ್ವಚ್ಛಗೊಳಿಸಿ ಕೊಡಬೇಕೆಂದು ಶ್ರೀ.ಎ.ಎಸ್.ರಾಜು ರವರು ಸಭೆಗೆ ಕೋರಿದರು. | ನೋಡೆಲ್ ಅಧಿಕಾರಿಗಳು ಸಮುದಾಯ ಭವನವನ್ನು ಸ್ವಚ್ಚಗೊಳಿಸಲು ಪೌರ ಕಾರ್ಮಿಕರಿಗೆ ತಿಳಿಸುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು. | ಕಿರಿಯ ಆರೋಗ್ಯ ಪರಿವೀಕ್ಷಕರು (ಆರೋಗ್ಯ ಇಲಾಖೆ) |
| 03 | ವಾರ್ಡ್ ನಂ–01ರ ಅಪ್ಪಯ್ಯಣ್ಣ ಬೀದಿ ಹೊಸಬೀದಿ 2ನೇ ಕ್ರಾಸ್ ಹತ್ತಿ ಚರಂಡಿ ಬದಿ ಸಿಲ್ಟ್ ಕ್ಲೀನಿಂಗ್ ಮತ್ತು ರಸ್ತೆ ದುರಸ್ಥಿಪಡಿಸಲು ಸ್ಥಳೀಯ ಶಿವಣ್ಣನವರು ಸಭೆಯಲ್ಲಿ ಕೋರಿದರು. | ಸಹಾಯಕ ಅಭಿಯಂತರರಾದ ಶ್ರೀ. ಮಲ್ಲಿನಾಥ ಮಲ್ಕಾಪುರ ವಾರ್ಡ್ ನಂ –01 ರವರಿಗೆ ಸ್ಥಳದಲ್ಲಿ ಪರೀಶಿಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ನೋಡೆಲ್ ಅಧಿಕಾರಿಗಳು ತಿಳಿಸಿದರು. | ಸಹಾಯಕ ಅಭಿಯಂತರರು (ವಾರ್ಡ್ ನಂ–01) |

| | | | |
|---|---|---|---|
| 04 | ವಾರ್ಡ್ ನಂ -01ರ ಶಿವನಹಳ್ಳಿ ಶನಿಮಹಾತ್ಮ ದೇವಸ್ಥಾನದ ಮುಂದೆ ರಸ್ತೆ ಚರಂಡಿ ನಿರ್ಮಾಣ ಮಾಡುವುದನ್ನು ಸರಿಪಡಿಸಲು ಸ್ಥಳೀಯರಾದ ಶ್ರೀ.ಚಂದ್ರಪ್ಪ ರವರು ಸಭೆಯಲ್ಲಿ ಕೋರಿದರು. | ಸಹಾಯಕ ಅಭಿಯಂತರರಾದ ಶ್ರೀ. ಮಲ್ಲಿನಾಥ ಮಲ್ಲಾಪುರ ವಾರ್ಡ್ ನಂ -01 ರವರಿಗೆ ಸ್ಥಳದಲ್ಲಿ ಪರೀಶಿಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ನೋಡೆಲ್ ಅಧಿಕಾರಿಗಳು ತಿಳಿಸಿದರು. | ಸಹಾಯಕ ಅಭಿಯಂತರರು (ವಾರ್ಡ್ ನಂ-01) |

- ವಾರ್ಡ್ ನಂ-1ರ ವ್ಯಾಪ್ತಿಯಲ್ಲಿರುವ ಜಕ್ಕೂರು ಮುಖ್ಯರಸ್ತೆ ಶಿವನಹಳ್ಳಿಯ ರಸ್ತೆ ಬದಿ ಅನದೀಕೃತವಾಗಿ ನಿರ್ಮಿಸಿರುವ ಅಭಯ ಆಂಜೀನೇಯ ಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿರುವ ಚಿಕ್ಕ ದೇವಸ್ಥಾನವನ್ನು ತೆರವುಗೊಳಿಸಲು ಸಭೆಯಲ್ಲಿ ತಿರ್ಮಾನಿಸಲಾಯಿತು.
- ವಾರ್ಡ್ ನಂ -01ರ ವ್ಯಾಪ್ತಿಯಲ್ಲಿರುವ ಜಯಣ್ಣಬಡಾವಣೆಯಲ್ಲಿ ರಾಜಕಾಲುವೆಗೆ ಅಡ್ಡಲಾಗಿ ಹಾಗೂ ರಸ್ತೆಗೆ ಅಡ್ಡಲಾಗಿ ನಿರ್ಮಿಸಿರುವ ಶೆಡ್‌ಅನ್ನು ಪಾಲಿಕೆವತಿಯಿಂದ ಪೊಲಿಸ್ ಬಂದೊಬಸ್ತ್ ಪಡೆದು ತೆರವುಗೊಳಿಸಿರುವ ಬಗ್ಗೆ ಹಾಗೂ ಈ ಡೆಬ್ರಿಸ್‌ಅನ್ನು ದೂರದ ಸ್ಥಳಕ್ಕೆ ಸಾಗಿಸಿರುವ ಬಗ್ಗೆ ವಾರ್ಡ್ ನಂ-01ರ ಕಾರ್ಯದರ್ಶಿಗಳು ಹಾಗೂ ನೋಡಲ್ ಅಧಿಕಾರಿಗಳು ಸಭೆಗೆ ತಿಳಿಸಿದರು.
-

ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು. ಮುಂದಿನ ಸಭೆಯಲ್ಲಿ ಸಾಧಿಸಬೇಕಾದ ಗುರಿ ಹಾಗೂ ಸಾದನೆ ಬಗ್ಗೆ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಕಮಿಟಿ, ವಾರ್ಡ್ ನಂ. 01(ಕೆಂಪೇಗೌಡ)

ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೊಡೆಲ್ ಅಧಿಕಾರಿಗಳು
ವಾರ್ಡ್ ಕಮಿಟಿ, ವಾರ್ಡ್ ನಂ. 01(ಕೆಂಪೇಗೌಢ)

ಪ್ರತಿಯನ್ನು:

ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳ ಮಾಹಿತಿಗಾಗಿ.

1. ಶ್ರೀ.ರಜನಿಕಾಂತ್ ಮಲ್ಲಿ, ಅಧ್ಯಕ್ಷರು ಹಾಗೂ ನೊಡಲ್ ಅಧಿಕಾರಿಗಳು.

## ಅಧಿಕಾರಿಗಳ ಮಾಹಿತಿಗಾಗಿ.

1. ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರ ಮಾಹಿತಿಗಾಗಿ.
2. ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರ ಮಾಹಿತಿಗಾಗಿ.
3. ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯರವರ ಮಾಹಿತಿಗಾಗಿ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ರವರ ಸೂಕ್ತ ಕ್ರಮಕ್ಕಾಗಿ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ವಿಭಾಗ ಬಿ.ಬಿ.ಎಂ.ಪಿ ರವರ ಸೂಕ್ತ ಕ್ರಮಕ್ಕಾಗಿ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, (ವಿದ್ಯುತ್) ಯಲಹಂಕರವರ ಸೂಕ್ತ ಕ್ರಮಕ್ಕಾಗಿ.